# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.61/2025

Pw-03

Cw-04

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಶಶಿಕುಮಾರ ಬೋನರ |
| ತಂದೆಃಗಂಡನ ಹೆಸರುಃ | ಶ್ರೀ ಮೋಹನ |
| ವಯಸ್ಸುಃ | 26 ವರ್ಷ |
| ಉದ್ಯೋಗಃ | ದ್ವಿ.ದ.ಸ, ತಹಶೀಲ್ದಾರ ಕಚೇರಿ, ಹಾವೇರಿ |
| ವಾಸ ಸ್ಥಳಃ | ಹಾವೇರಿ |

**ದಿನಾಂಕ:27.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 04 ವರ್ಷಗಳಿಂದ ಇಲ್ಲಿಯತನಕ ಹಾವೇರಿ ತಾಲೂಕು ಕಚೇರಿಯಲ್ಲಿ ದ್ವಿದಸ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ31.10.2025 ರಂದು ಬೆಳಿಗ್ಗೆ 10.30-11.00 ಗಂಟೆ ಸಮಯದಲ್ಲಿ ನಾನು ಹಾವೇರಿ ತಾಲೂಕು ಕಚೇರಿಯಲ್ಲಿ ದ್ವಿ.ದ.ಸಹಾಯಕನಾಗಿ ಕರ್ತವ್ಯದಲ್ಲಿದ್ದಾಗ ನಮ್ಮ ತಹಶೀಲ್ದಾರವರು ನನಗೆ ನೀವು ಸಂಜೆ 5.00 ಗಂಟೆ ಸಮಯಕ್ಕೆ ಹಾವೇರಿಯ ಡಿಸಿಆರ್ ಇ ಪೊಲೀಸ್ ಠಾಣೆ ಕಚೇರಿಗೆ ಜಪ್ತು ಪಂಚನಾಮೆಗೆ ಪಂಚರಾಗಿ ಹೋಗಬೇಕು ಎಂದು ಹೇಳಿದರು. ಅದರಂತೆ ನಾನು ಮತ್ತು ಚಾಸಾ-5 ರವರು ಹಾವೇರಿಯ ಡಿಸಿಆರ್ ಇ ಪೊಲೀಸ್ ಠಾಣೆಗೆ ಸಂಜೆ 5.00 ಗಂಟೆಗೆ ಹೋದೆವು.

2. ಆಗ ಡಿಸಿಆರ್ ಇ ಪೊಲೀಸ್ ಠಾಣೆಯಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಹಾಜರಿದ್ದು, ರಕ್ತಸಿಕ್ತವಾದಂತಹ ಒಂದು ಶರ್ಟ ಮತ್ತು ಒಂದು ಜಂಪರನ್ನು ನಮ್ಮ ಸಮಕ್ಷಮ ತನಿಖಾಧಿಕಾರಿ ಮುಂದೆ ಹಾಜರುಪಡಿಸಿದರು. ಆಗ ತನಿಖಾಧಿಕಾರಿಯು ಸದರಿ ಬಟ್ಟೆಗಳನ್ನು ನಮ್ಮ ಸಮಕ್ಷಮ ಪರಿಶೀಲನೆ ಮಾಡಿ ಜಪ್ತು ಪಂಚನಾಮೆ ಮೂಲಕ ವಶಪಡಿಸಿಕೊಂಡು,

ಪೋಟೋ ತೆಗೆದುಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–5 ಎಂದು, ನನ್ನ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಪೊಲೀಸರು ತೆಗೆದ 3 ಪೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ರಿಂದ 8 ಎಂದು ಗುರುತಿಸಲಾಯಿತು. ಪೊಲೀಸರು ನಮ್ಮ ಸಮಕ್ಷಮ ಜಪ್ತು ಪಂಚನಾಮೆ ಜರುಗಿಸಿ ವಶಪಡಿಕೊಂಡಂತಹ ನ್ಯಾಯಾಲಯದ ಮುಂದಿರುವ ರಕ್ತಸಿಕ್ತವಾದ ಒಳ ಅಂಗಿ ಮತ್ತು ಒಂದು ಜಂಪರ ಇವುಗಳನ್ನು ನೋಡುತ್ತಿದ್ದು, ಅವುಗಳನ್ನು ಮು.ಮಾ–4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

ಮಾನ್ಯ ವಕೀಲರನ್ನು ಕರೆಸಲಾಯಿತು. ಗೈರು ಹಾಜರು ಉಳಿದಿರುತ್ತಾರೆ. ಶ್ರೀ ಕೆ.ಎಸ್.ಟಿ ಹಾಜರಿದ್ದು, ಶ್ರೀ ಎಂ.ಸಿ.ಹೆಚ್ ರವರಿಗೆ ಆರೋಗ್ಯ ಸರಿಯಿಲ್ಲದೆ ಆಸ್ಪತ್ರೆಗೆ ಹೋಗಿರುತ್ತಾರೆಂದು ಕಾರಣ ಹೇಳಿ ಸಮಯ ಕೇಳಿದ್ದು, ನ್ಯಾಯದಾನ ಹಿತದೃಷ್ಠಿಯಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.